ಕರ್ನಾಟಕ ಸರ್ಕಾರ

ಸಂಖ್ಯೆ ಸಕಇ 120 ಬಿಸಿಎ 94

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 4-7-1994

## ಸುತ್ತೋಲೆ

ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದಲ್ಲಿನ ಇತರೆ ಹಿಂದುಳಿದ ವರ್ಗಗಳ ಜನಾಂಗದವರಿಗೆ ಭಾರತ ಸಂವಿಧಾನದ ಅನುಚ್ಛೇದ 15(4) ಹಾಗೂ 16(4)ರ ರೀತ್ಯ ವಿವಿಧ ಮೀಸಲಾತಿ ಸೌಲಭ್ಯಗಳನ್ನು ನೀಡುವ ಆದೇಶವನ್ನು ಸರ್ಕಾರದ ಆದೇಶದ ಸಂಖ್ಯೆ ಸಕಇ 75 ಬಿಸಿಎ 92ರ ದಿನಾಂಕ: 20-4-94ರಲ್ಲಿ ಹೊರಡಿಸಿದ್ದು, ತತ್ಸಂಬಂಧವಾಗಿ ಇತರೇ ಹಿಂದುಳಿದ ವರ್ಗಗಳ ವಿವಿಧ ವರ್ಗಗಳವರು ಮೀಸಲಾತಿ ಸೌಲಭ್ಯಗಳನ್ನು ಪಡೆಯುವಲ್ಲಿ ಸಲ್ಲಿಸಬೇಕಾದ ವಿವಿಧ ನಮೂನೆಗಳ ಪ್ರಪತ್ರಗಳನ್ನು ದಿನಾಂಕ: 7-5-1994ರ ಆದೇಶ ಸಂಖ್ಯೆ ಸಕಇ 94 ಬಿಸಿಎ 94ರಲ್ಲಿ ಹೊರಡಿಸಲಾಗಿದ್ದು, ಈ ಆದೇಶಗಳಲ್ಲಿನ ಸರ್ಕಾರದ ನಿರ್ಣಯಗಳ ಕುರಿತಂತೆ ಕೆಲವು ತಹಸೀಲ್ದಾರರುಗಳು ಹಾಗೂ ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳು ಸ್ಪಷ್ಟೀಕರಣವನ್ನು ಕೋರಿದ್ದು, ಈ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಲಾಗುತ್ತಿದೆ.

(1) ಪ್ರಸ್ತುತ ಮೀಸಲಾತಿ ನಿಯಮಗಳ ಮೇರೆಗೆ ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಕೇವಲ ತಹಸೀಲ್ದಾರರು ಹಾಗೂ ಅವರಿಗೆ ಮೇಲ್ಪಟ್ಟಂತಹ ಕಂದಾಯ ಅಧಿಕಾರಿಗಳಿಗೆ ಮಾತ್ರ ಅಧಿಕಾರವಿರುವುದು.

(2) ಈ ರೀತಿಯಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ನೀಡಬೇಕಾದಂತಹ ಸಂದರ್ಭದಲ್ಲಿ ನೀಡುವ ಪ್ರಾಧಿಕಾರವು — ಅಭ್ಯರ್ಥಿಗಳು ಹೊಸ ಮೀಸಲಾತಿ ನಿಯಮಗಳ ಮೇರೆಗೆ ಯಾವ ವರ್ಗದಡಿಯಲ್ಲಿ ಬರುತ್ತಾರೆ ಹಾಗೂ ಆ ವರ್ಗಗಳಡಿಯಲ್ಲಿ ಅವರುಗಳು ಹಿಂದುಳಿದವರಲ್ಲಿ ಮುಂದುವರಿದವರಾಗಿಲ್ಲವೆಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು.

(3) ಹಿಂದುಳಿದವರಲ್ಲಿ ಮುಂದುವರಿದವರನ್ನು ಗುರುತಿಸುವಲ್ಲಿ ತಂದೆ ತಾಯಿ, ಗಂಡ ಹೆಂಡತಿ ಅಥವಾ ಅಭ್ಯರ್ಥಿ ಹಾಗೂ ಪೋಷಕರು ದಿನಾಂಕ: 20-4-94ರ ಆದೇಶ ಭಾಗದಲ್ಲಿನ 2 (1) ಕ್ಕೆ ಸಂಬಂಧಿಸಿದಂತೆ ಅವರ ವೇತನ ಶ್ರೇಣಿಯು ರೂ 2050-3950 ರಲ್ಲಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು ಹಾಗೂ 2 (2) ರಲ್ಲಿಯ ಯಾವುದಾದರೂ ಹುದ್ದೆಗಳಲ್ಲಿದ್ದಾರೆಯೇ; 2(3),(4),(5) ರಲ್ಲಿನ ನಿಬಂಧನೆಗಳಿಗೆ ಒಳಪಡುತ್ತಾರೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು.

(4) ವರ್ಗ 3ಕ್ಕೆ ಸಂಬಂಧಿಸಿದಂತೆ ಜಾತಿ ಪ್ರಮಾಣ ಪತ್ರಗಳನ್ನು ನೀಡುವಾಗ್ಗೆ ಅಭ್ಯರ್ಥಿಗಳು ಹಿಂದುಳಿದವರಲ್ಲಿ ಮುಂದುವರಿದವರಾಗಿರುತ್ತಾರೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದರ ಜೊತೆಗೆ ಅಭ್ಯರ್ಥಿಗಳು ಗ್ರಾಮಾಂತರ ಪ್ರದೇಶಕ್ಕೆ ಸೇರಿದವರೇ ಎಂಬುದನ್ನು ಸಹ ಖಾತ್ರಿಪಡಿಸಿಕೊಳ್ಳುವುದು. ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳು ಎಂದರೆ ಅಭ್ಯರ್ಥಿಗಳು ತಮ್ಮ ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣಗಳನ್ನು 50000 ಜನಸಂಖ್ಯೆಯನ್ನು ಮೀರದ ಹಳ್ಳಿ, ಗ್ರಾಮ, ಪಟ್ಟಣ ಪ್ರದೇಶಗಳಲ್ಲಿ ಮುಗಿಸಿರಬೇಕು. ಹಾಗೂ 1ನೇ ತರಗತಿಯಿಂದ ಅರ್ಹ ಪರೀಕ್ಷೆಯವರೆಗೆ ಅಥವಾ ಎಸ್ಎಸ್ಎಲ್‌ಸಿ ವರೆಗಿನ ವಿದ್ಯಾಭ್ಯಾಸವನ್ನು ಮುಗಿಸಿರಬೇಕು.

(5) ತಾಂತ್ರಿಕ ಶಿಕ್ಷಣ ಹಾಗೂ ವೃತ್ತಿಪರ ಶಿಕ್ಷಣಗಳಿಗೆ ಪ್ರವೇಶಾವಕಾಶವನ್ನು ಪಡೆಯುವಲ್ಲಿ ಹಾಗೂ ನೇಮಕಾತಿಗಳಿಗೆ ಮೀಸಲಾತಿಗಳನ್ನು ಪಡೆಯುವಲ್ಲಿ ಪರಿಶೀಲನಾ ಪ್ರಮಾಣ ಪತ್ರವನ್ನು ಪಡೆಯಬೇಕೆಂಬ ನಿಬಂಧನೆಯನ್ನು ಸರ್ಕಾರದ ಆದೇಶದಲ್ಲಿ ವಿಧಿಸಿರುವ ಕಾರಣ ನೀಡುವ ಪ್ರಾಧಿಕಾರವಾದ ತಹಸೀಲ್ದಾರರು ಹಾಗೂ ಮೇಲ್ಪಟ್ಟ ಕಂದಾಯ ಅಧಿಕಾರಿಗಳು ಇಂತಹ ಅಭ್ಯರ್ಥಿಗಳಿಗೆ ಯಾವುದೇ ರೀತಿಯಲ್ಲಿಯೂ ವಿಳಂಬ ಮಾಡದೆ ಘೋಷಣಾ ಪ್ರಮಾಣ ಪತ್ರಗಳಿಗೆ ಒತ್ತಾಯಪಡಿಸದೆ ಪರಿಶೀಲನಾ ಪ್ರಮಾಣ ಪತ್ರವನ್ನು ನೀಡುವುದು.

(6) ಅಭ್ಯರ್ಥಿಗಳ ತಂದೆ ತಾಯಿ : ಪೋಷಕರು : ಗಂಡ ಹೆಂಡತಿ ಅಥವಾ ಸ್ವತಃ ಅಭ್ಯರ್ಥಿಯೇ ಆಗಲಿ ರೂ 2050-3950ರ ವೇತನ ಶ್ರೇಣಿಯೊಳಗೆ ಬಾರದೇ ಸರ್ಕಾರದ : ಸರ್ಕಾರಿ ಸ್ವಾಮ್ಯದ ಕೇಂದ್ರ, ಸರ್ಕಾರದ : ಕೇಂದ್ರ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಅವರುಗಳು ಹಿಂದುಳಿದವರಲ್ಲಿ ಮುಂದುವರಿದವರ ಸಾಲಿಗೆ ಬರುವುದಿಲ್ಲ. ಇದನ್ನು ಪರಿಗಣಿಸುವಾಗ್ಗೆ ಪ್ರಸ್ತುತ ಅವರು ಪಡೆಯುತ್ತಿರುವ ವೇತನದ ಹಂತ ಹಾಗೂ ಇತರೆ ಭತ್ಯೆಗಳನ್ನು ಪರಿಗಣಿಸಬಾರದು.

(ಸ) 4.7.94
ಉಪಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಗೆ

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಸರ್ಕಾರಿ ಮುದ್ರಣಾಲಯ ಇವರಿಗೆ ಇದನ್ನು ವಿಶೇಷ ಪತ್ರಿಕೆಯಲ್ಲಿ ಈ ಕೂಡಲೇ ಪ್ರಕಟಿಸಿ ಇದರ 5000 ಮುದ್ರಿತ ಪ್ರತಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಕೋರಲಾಗಿದೆ.

....2